ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ದೇವರಾಜ ಅರಸ್ ಮಾರ್ಕೆಟ್, ಹಾಸನ. ☎ 264825

ವಾರ್ಷಿಕ ಬಡ್ಡಿ ದರದ ವಿವರಗಳು	ಸಾಮಾನ್ಯರಿಗೆ %	ಹಿರಿಯ ನಾಗರಿಕರಿಗೆ %
* 1 ವರ್ಷದಿಂದ 3 ವರ್ಷಗಳವರೆಗೆ	10.5	11
* 181ದಿನಗಳಿಂದ 365 ದಿನಗಳವರೆಗೆ	8	8.5
* 91 ದಿನಗಳಿಂದ 180 ದಿನಗಳವರೆಗೆ	7	7.5
* 31 ದಿನಗಳಿಂದ 90 ದಿನಗಳವರೆಗೆ	6	6.5
* 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ		

-ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

41ನೇ ವರ್ಷದಲ್ಲಿ

ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ

ವ್ಯವಸ್ಥಾಪಕ ಸಂಪಾದಕ :ಎಸ್.ಎನ್.ಮಂಜುನಾಥದತ್ತ

PREMIER MARKETING
#817/A,Opp: Mallige Residency,Govt.High School Field,Road,Hassan.
Ph:9620621333
9448742971
9844090035
08172-233509
Dr.Aquaguard
RO+UV+TDS Controller Water Purifier & Water Softner

ದೇಶದ 91 ಜಲಾಶಯಗಳ ನೀರಿನ ಸಂಗ್ರಹ ಮಟ್ಟ ಕುಸಿತ

ದೇಶದಾದ್ಯಂತ ಇರುವ 91 ಪ್ರಮುಖ ಜಲಾಶಯಗಳ ನೀರಿನ ಸಂಗ್ರಹ ಮಟ್ಟವು ಕೇವಲ ಒಂದು ವಾರದ ಅಂತರದಲ್ಲಿ ಶೇ.64ರಿಂದ ಶೇ.62ಕ್ಕೆ ಕುಸಿದಿದೆ ಎಂದು ಕೇಂದ್ರ ಜಲ ಸಂಪನ್ಮೂಲ ಸಚಿವಾಲಯದ ಅಧಿಕೃತ ಪ್ರಕಟಣೆ ತಿಳಿಸಿದೆ. ಪಂಜಾಬ್, ರಾಜಸ್ಥಾನ, ಜಾರ್ಖಂಡ್, ಒಡಿಶಾ, ಗುಜರಾತ್, ಉತ್ತರಪ್ರದೇಶ, ಮಧ್ಯಪ್ರದೇಶ, ಛತ್ತೀಸ್‌ಗಢ ಮತ್ತು ತೆಲಂಗಾಣ ರಾಜ್ಯಗಳಲ್ಲಿನ ಜಲಾಶಯಗಳು ಕಳೆದ ವರ್ಷಕ್ಕಿಂತ ಈಗ ಕಡಿಮೆ ಸಂಗ್ರಹ ಮಟ್ಟ ತಲುಪಿವೆ.



‘ರಾಜಿನಾಮೆಗೆ ಸಿದ್ಧ’

ಮಾದಿಗ ಜನಾಂಗಕ್ಕೆ ಒಳ ಮೀಸಲಾತಿ ಸಿಗುವಂತೆ ಮಾಡಲು ನಾನು ಅಸಹಾಯಕನಾಗಿದ್ದೇನೆ ಎಂದು ಕೆಲವು ಮುಖಂಡರು ಹೇಳಿದ್ದಾರೆ. ನಾನು ಅಸಹಾಯಕನಾಗಿದ್ದೇನೆ ಎನ್ನುವುದಾದರೆ, ರಾಜಿನಾಮೆ ಕೊಡಲು ಸಿದ್ಧ ಎಂದು ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಖಾತೆ ಸಚಿವ ಹೆಚ್.ಆಂಜನೇಯ ತಿಳಿಸಿದ್ದಾರೆ. ಮಾದಿಗ ಜನಾಂಗಕ್ಕೆ ಒಳ ಮೀಸಲಾತಿ ನೀಡುವಂತೆ ಆಗ್ರಹಿಸಿ ಕೂಡಲಸಂಗಮದಿಂದ ಬೆಂಗಳೂರಿಗೆ ಪಾದಯಾತ್ರೆ ಹಮ್ಮಿಕೊಂಡಿದ್ದ ಕಾರ್ಯಕರ್ತರನ್ನುದ್ದೇಶಿಸಿ ಅವರು ಈ ವಿಷಯ ತಿಳಿಸಿದ್ದಾರೆ.



ಸಲೀಲ್ ಪರೇಖ್ ಇನ್ಫೋಸಿಸ್‌ನ ನೂತನ ಸಿಇಒ, ಎಂಡಿ

ಇನ್ಫೋಸಿಸ್‌ನ ನೂತನ ಕಾರ್ಯ ನಿರ್ವಹಣಾಧಿಕಾರಿ ಮತ್ತು ಆಡಳಿತ ನಿರ್ದೇಶಕರನ್ನಾಗಿ ಸಲೀಲ್ ಪರೇಖ್ ಅವರನ್ನು ನೇಮಕ ಮಾಡಲಾಗಿದೆ. ಜ.2,2018ರಿಂದ ಸಲೀಲ್ ಅಧಿಕಾರ ಸ್ವೀಕರಿಸಲಿದ್ದಾರೆ ಎಂದು ಸಂಸ್ಥೆ ತಿಳಿಸಿದೆ. ಐಟಿ ಉದ್ಯಮದ ಕ್ಷೇತ್ರದಲ್ಲಿ 3 ದಶಕಗಳಷ್ಟು ಅನುಭವ ಹೊಂದಿರುವ ಸಲೀಲ್ ಅವರು ಇನ್ಫೋಸಿಸ್‌ಗೆ ಸಿ.ಇ.ಓ. ಮತ್ತು ಆಡಳಿತ ನಿರ್ದೇಶಕರಾಗಿ ನೇಮಕವಾಗಿರುವುದಕ್ಕೆ ಹರ್ಷಿಸುತ್ತೇವೆ ಎಂದು ಸಂಸ್ಥೆ ತಿಳಿಸಿದೆ.

ಜನತಾಮಾಧ್ಯಮ ಬೆಳಗಿನ ದೈನಿಕ JANATHAMADHYAMA KARKAN. RNI 41566. ಸಂಪುಟ : 41 ಸಂಚಿಕೆ :27 ಭಾನುವಾರ ಡಿ.3, 2017 ದೂರವಾಣಿ : 268494 ಪುಟ-4 ರೂ.2-00 NO. HSN-761/ 2015-17

ಕೆರೆಗಳ ಪುನಶ್ಚೇತನಕ್ಕೆ ಆಗ್ರಹಿಸಿ ಸತ್ಯಾಗ್ರಹಕ್ಕೆ ಹಿರಿಯ ನಾಗರಿಕರ ನಿರ್ಧಾರ

ಹಾಸನ : ನಗರ ವ್ಯಾಪ್ತಿಯಲ್ಲಿರುವ ಮೂರೂ ಕೆರೆಗಳ ಪುನಶ್ಚೇತನಕ್ಕೆ ಹಾಗೂ ಈ ಕೆರೆಗಳಿಗೆ ನೀರು ತುಂಬಿಸುವಂತೆ ಒತ್ತಾಯಿಸಿ ಅನಿರ್ದಿಷ್ಟಾವಧಿ ಸತ್ಯಾಗ್ರಹ ನಡೆಸಲು ಹಿರಿಯ ನಾಗರಿಕರ ವೇದಿಕೆ ನಿರ್ಧರಿಸಿದೆ.

ಕಳೆದ ಏಳೆಂಟು ತಿಂಗಳಿನಿಂದಲೂ ಚನ್ನಪಟ್ಟಣ ಕೆರೆಗೆ ನೀರು ತುಂಬಿಸುವಂತೆ ಮನವಿ ಸಲ್ಲಿಸಿದರೂ ಜಿಲ್ಲಾಡಳಿತ ನಿರ್ಲಕ್ಷ್ಯ ವಹಿಸಿರುವ ಬಗ್ಗೆ ಹಿರಿಯ ನಾಗರಿಕರ ವೇದಿಕೆ ಸಭೆಯಲ್ಲಿ ತೀವ್ರ ಅಸಮಾಧಾನ ವ್ಯಕ್ತವಾಯಿತಲ್ಲದೆ, ಚಳವಳಿ ಮಾರ್ಗ ಹಿಡಿಯಲು ನಿರ್ಣಯ ಕೈಗೊಳ್ಳಲಾಯಿತು.

ನಗರದ ಎಂ.ಜಿ.ರಸ್ತೆಯಲ್ಲಿರುವ ವಿಶ್ವೇಶ್ವರಾಯ ಭವನದಲ್ಲಿ ಶನಿವಾರ ನಡೆದ ಸಭೆಯಲ್ಲಿ ಈ ಸಂಬಂಧ ವಿಸ್ತೃತವಾಗಿ ಚರ್ಚೆ ನಡೆಯಿತು. ಡಿಸೆಂಬರ್ 4ರಂದು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲು ಅಭಿಪ್ರಾಯ ವ್ಯಕ್ತವಾಯಿತು.

ಮನವಿ ಸಲ್ಲಿಸಿದ ನಂತರ ಒಂದು ವಾರ ಗಡುವು ನೀಡಲಾಗಿದ್ದು, ಆ ವೇಳೆಯೊಳಗೆ ಸರಿಯಾಗಿ ಪ್ರತಿಕ್ರಿಯಿಸದಿದ್ದರೆ ಡಿಸೆಂಬರ್ 9ರಂದು ಎಲ್ಲಾ ಸಂಘ ಸಂಸ್ಥೆಗಳ ಸಭೆ ಕರೆದು ಚರ್ಚೆ ನಡೆಸಲು ಸಭೆ ಒಪ್ಪಿಗೆ ನೀಡಿತು.

ಈ ಸಭೆಯಲ್ಲಿ ಎಲ್ಲಾ ಸಂಘ ಸಂಸ್ಥೆಗಳ ಅಭಿಪ್ರಾಯ ಪಡೆದ ನಂತರ ಡಿಸೆಂಬರ್ 11ರಂದು ಅನಿರ್ದಿಷ್ಟಾವಧಿ ಸತ್ಯಾಗ್ರಹಕ್ಕೆ ಬೆಂಬಲ ನೀಡುವಂತೆ ಕೋರಲು ನಿರ್ಣಯಿಸಲಾಯಿತು.

ಚನ್ನಪಟ್ಟಣ ಕೆರೆ ಅಭಿವೃದ್ಧಿ ಹೆಸರಿನಲ್ಲಿ ಖರ್ಚು-ವೆಚ್ಚಕ್ಕೆ ಸಂಬಂಧಿಸಿದಂತೆ ಈವರೆಗೂ ಮಾಹಿತಿ ಕೊಟ್ಟಿಲ್ಲ. ಜಿಲ್ಲಾಧಿಕಾರಿ ಕಛೇರಿಯನ್ನು ಸಂಪರ್ಕಿಸಿದರೆ ಪ್ರಾಧಿಕಾರದವರು ಪ್ರವಾಸೋದ್ಯಮ ಇಲಾಖೆಗೆ, ಪ್ರವಾಸೋದ್ಯಮ ಇಲಾಖೆಯವರು ಪಿಡಬ್ಲ್ಯೂಡಿ ಇಲಾಖೆಗೆ ಸಂಪರ್ಕಿಸುವಂತೆ ಹೇಳುತ್ತಿರುವುದರ ಬಗ್ಗೆ ವಿಪರೀತ ಅಸಮಾಧಾನ ವ್ಯಕ್ತವಾಯಿತು.

ಮಾಹಿತಿಯನ್ನೇ ನೀಡದಿರುವ ಬಗ್ಗೆ ಸಭೆಯಲ್ಲಿ ಚರ್ಚೆ ನಡೆದು, ಈಗ ಆರ್.ಟಿ.ಇ. ಅಡಿ ಮಾಹಿತಿ ನೀಡುವ ಕಾನೂನು ಇದೆ. ರಾಜ್ಯ ಮಾಹಿತಿ ಹಕ್ಕು ಆಯೋಗದ ಅಧ್ಯಕ್ಷರು ಕೂಡ ಮಾಹಿತಿ ನೀಡುವಲ್ಲಿ ನಿರ್ಲಕ್ಷ್ಯ ತೋರಿದರೆ ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿದ್ದಾರೆ. ಹಾಗಾಗಿ ಮಾಹಿತಿ ಹಕ್ಕು ಆಯೋಗಕ್ಕೂ ಈ ಸಂಬಂಧ ವಿವರ ಸಲ್ಲಿಸಲು ನಿರ್ಧರಿಸಲಾಯಿತು. ಇದಲ್ಲದೆ ಅನಿರ್ದಿಷ್ಟಾವಧಿ ಹೋರಾಟದ ಜೊತೆಗೆ ಕಾನೂನು ಹೋರಾಟ ರೂಪಿಸಲು ತೀರ್ಮಾನಿಸಲಾಯಿತು.

ಮುಖ್ಯಾಂಶ

- ☐ ನಾಳೆ ಡಿ.ಸಿ.ಗೆ ಮನವಿ ಪತ್ರ
- ☐ ಒಂದು ವಾರ ಗಡುವು ನೀಡಲು ತೀರ್ಮಾನ
- ☐ ಸರಿಯಾದ ಪ್ರತಿಕ್ರಿಯೆ ಬಾರದಿದ್ದರೆ ಡಿ.9ರಂದು ಸಂಘ ಸಂಸ್ಥೆಗಳ ಸಭೆ
- ☐ ಡಿ.11ಕ್ಕೆ ಎಲ್ಲರ ಬೆಂಬಲ ಪಡೆದು ಅನಿರ್ದಿಷ್ಟಾವಧಿ ಧರಣಿ
- ☐ ಹಾಸನ್ ಬಂದ್ ಕರೆಗೂ ಹಲವರ ಸಲಹೆ

3 ಕೆರೆ ಪುನಶ್ಚೇತನಗೊಳಿಸಿ

ಹುಣಸಿನಕೆರೆಯು ಕೊಳಚೆಯಾಗಿದ್ದು, ಕಲುಷಿತಗೊಳ್ಳುತ್ತಿದೆ. ಈ ಕೆರೆಗೆ ಮಳೆ ನೀರು ಹಾಗೂ ಶುದ್ಧ ನೀರನ್ನು ಶೇಖರಿಸುವ ಬಗ್ಗೆಯೂ ಹಿರಿಯ ನಾಗರಿಕರ ಸಭೆಯಲ್ಲಿ ಚರ್ಚೆಯಾಯಿತು. ನಗರಕ್ಕೆ ಹೊಂದಿಕೊಂಡಂತಿರುವ ಸತ್ಯವಂಗಲ ಕೆರೆಗೆ ನೀರು ತುಂಬಿಸಬೇಕು ಹಾಗೂ ಜವೇನಹಳ್ಳಿ ಕೆರೆ ಪುನಶ್ಚೇತನಗೊಳಿಸಬೇಕು ಎಂದು ಒತ್ತಾಯಿಸಲಾಯಿತು.

ಈ ಸಭೆಯಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಂ.ಶಿವಣ್ಣ, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಜಿ.ಎಲ್.ಮುದ್ದೇಗೌಡ, ಜಯಲಕ್ಷ್ಮೀ ರಾಜಣ್ಣಗೌಡ, ಡಾ॥ವೈ.ಎಸ್.ವೀರಭದ್ರಪ್ಪ, ಸಿದ್ದಯ್ಯ, ಪುಟ್ಟರಾಜೇಗೌಡ, ಬೋರೇಗೌಡ, ರೈತ ಮುಖಂಡ ಎಸ್.ಎನ್.ಮಂಜುನಾಥದತ್ತ, ರಂಗೇಗೌಡ, ಪತ್ರಕರ್ತ ಆರ್.ಪಿ. ವೆಂಕಟೇಶಮೂರ್ತಿ, ಜಿಲ್ಲಾ ಡಾ॥ರಾಜ್‌ಕುಮಾರ್ ಅಭಿಮಾನಿ ಸಂಘದ ಅಧ್ಯಕ್ಷ ಬಾಳ್ಳು ಗೋಪಾಲ್, ವನಜಾಕ್ಷಮ್ಮ, ಸಮೀರ್ ಅಹಮ್ಮದ್ ಇನ್ನಿತರರು ಇದ್ದರು.

> **“ಕೆರೆಗಳಿಗೆ ನೀರು ತುಂಬಿಸುವ ಹೋರಾಟದಲ್ಲಿ ಹೇಳಿಕೊಳ್ಳುವಂತಹ ಯಶಸ್ಸು ದೊರೆತಿಲ್ಲ. ಶೀಘ್ರವೇ ಮತ್ತೊಂದು ಸಭೆ ಕರೆದು ಚರ್ಚೆ ನಡೆಸಬೇಕು. ವೇದಿಕೆ ವತಿಯಿಂದಲೇ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿ ಕಾನೂನು ಹೋರಾಟ ರೂಪಿಸಬೇಕು.**
>
> **-ಆರ್.ಪಿ.ವೆಂಕಟೇಶಮೂರ್ತಿ**

> **“ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿಯನ್ನು ಕೊಟ್ಟಿದ್ದರೂ ಚನ್ನಪಟ್ಟಣ ಕೆರೆಗೆ ಸಂಬಂಧಿಸಿದಂತೆ ಖರ್ಚು ಮಾಡಿದ ಹಣ ಇತ್ಯಾದಿ ವಿವರಗಳನ್ನು ಕೊಟ್ಟಿಲ್ಲ. ವಿನಾಕಾರಣ ಬೇರೆ ಬೇರೆ ಇಲಾಖೆಗಳಿಗೆ ಅಲೆದಾಡಿಸುತ್ತಾರೆ. ಜಿಲ್ಲಾಡಳಿತ ಈ ವಿಚಾರದಲ್ಲಿ ಪಾರದರ್ಶಕವಾಗಿ ನಡೆದುಕೊಂಡಿಲ್ಲ. -ಬಿ.ಕೆ.ಮಂಜುನಾಥ್**

ರೈಲ್ವೆ ಮೇಲ್ಸೇತುವೆಗೂ ಒತ್ತಾಯ

ಹೊಸ ಬಸ್ ನಿಲ್ದಾಣಕ್ಕೆ ತೆರಳಲು ಕಷ್ಟಸಾಧ್ಯವಾಗಿದೆ. ರೈಲ್ವೆ ಮೇಲ್ಸೇತುವೆಗೆ ಒತ್ತಾಯಿಸಿದರೂ ಪ್ರಯೋಜನವಾಗಿಲ್ಲ. ರೈಲ್ವೆ ಮೇಲ್ಸೇತುವೆ ಶೀಘ್ರವೇ ಕೈಗೆತ್ತಿಕೊಳ್ಳಬೇಕೆಂದು ಹಿರಿಯ ನಾಗರಿಕರ ವೇದಿಕೆ ಇದೇ ಸಂದರ್ಭದಲ್ಲಿ ಒಕ್ಕೊರಲಾಗಿ ಆಗ್ರಹಿಸಿತು.

ಹಲವರು ಈ ಕುರಿತು ಪ್ರತಿಕ್ರಿಯಿಸಿ, ರೈಲ್ವೆ ಮೇಲ್ಸೇತುವೆ ಆರಂಭಕ್ಕೆ ಉದಾಸೀನ ಧೋರಣೆ ತೋರುತ್ತಿರುವ ಕುರಿತು ಅಸಮಾಧಾನ ವ್ಯಕ್ತಪಡಿಸಿದರು.

ಸಂಘಟಿತರಾಗಲು ಕಾಫಿ ಬೆಳೆಗಾರರಿಗೆ ಸಲಹೆ

ಮಲ್ಲಿಪಟ್ಟಣದಲ್ಲಿ ತಾ॥ಕಾಫಿ ಬೆಳೆಗಾರರ ಸಂಘ ಉದ್ಘಾಟನೆ

ಅರಕಲಗೂಡು : ತಾಲ್ಲೂಕಿನಲ್ಲಿ ಸಣ್ಣ ಹಿಡುವಳಿದಾರರಾದ ಕಾಫಿ ಬೆಳೆಗಾರರು ತಮ್ಮ ಸಮಸ್ಯೆ ಪರಿಹಾರಕ್ಕಾಗಿ ಸಂಘಟಿತರಾಗಬೇಕಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು ತಿಳಿಸಿದರು.

ಮಲ್ಲಿಪಟ್ಟಣದಲ್ಲಿ ಶನಿವಾರ ಆಯೋಜಿಸಿದ್ದ ತಾಲ್ಲೂಕು ಕಾಫಿ ಬೆಳೆಗಾರರ ಸಂಘದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಾಫಿ ಬೆಳೆಗಾರರ ಸಮಸ್ಯೆ ಬಹುತೇಕ ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದೆ. ಕಳೆದ ಯುಪಿಎ ಸರ್ಕಾರ ದೊಡ್ಡ ಮೊತ್ತದಲ್ಲಿ 2 ಸಾವಿರ ಕೋಟಿ ರೂ. ಬೆಳೆಗಾರರ ಸಾಲ ಮನ್ನಾ ಮಾಡಿತ್ತು. ರಾಜ್ಯ ಸರ್ಕಾರ ಕೂಡ ತನ್ನ ವ್ಯಾಪ್ತಿಗೆ ಸಂಬಂಧಿಸಿದ ಎಲ್ಲ ಸಮಸ್ಯೆಗಳನ್ನು ಬಗೆಹರಿಸಲು ಪ್ರಾಮಾಣಿಕವಾಗಿ ಶ್ರಮಿಸುತ್ತಿದೆ ಎಂದು ಹೇಳಿದರು.

ಕಾಡಾನೆ ಹಾವಳಿ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲಾಗುತ್ತಿದೆ. ಆನೆ ಕಾರಿಡಾರ್ ನಿರ್ಮಾಣ ಸಂಬಂಧ ಈ ತಿಂಗಳ 5ರಂದು ದೆಹಲಿಯಲ್ಲಿ ಸಭೆ ನಡೆಯಲಿದ್ದು, ತಾವೂ ಸಹ ಪಾಲ್ಗೊಳ್ಳುತ್ತಿರುವುದಾಗಿ ತಿಳಿಸಿದರು.

ಕಾಫಿ ಬೆಳೆಗಾರರು ಪರ್ಯಾಯ ಬೆಳೆ ಬೆಳೆಯಬೇಕು. ಕಾಫಿ ಬೆಳೆಗಾರರನ್ನು ಕಾಡುತ್ತಿರುವ ಭೂ ಒತ್ತುವರಿ ಸಮಸ್ಯೆ ಪರಿಹಾರಕ್ಕೆ ಈಗಾಗಲೇ ಕಂದಾಯ ಸಚಿವರೊಂದಿಗೆ ಮಾತುಕತೆ ನಡೆಸಲಾಗಿದೆ ಎಂದರು.

ಕರ್ನಾಟಕ ಕಾಫಿ ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಬಿ.ಎಸ್.ಜಯರಾಂ, ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಯು.ಎಂ.ತೀರ್ಥಮಲ್ಲೇಶ್, ಜಿಲ್ಲಾ ಕಾಫಿ ಬೆಳೆಗಾರರ ಸಂಘದ ಅಧ್ಯಕ್ಷ ಸಿ.ಎಸ್.ಮಹೇಶ್, ಸಂಘಟನಾ ಕಾರ್ಯದರ್ಶಿ ಎನ್.ಬಿ. ಉದಯಕುಮಾರ್, ಕಾರ್ಯದರ್ಶಿ ಮುರುಳೀಧರ್, ಜಿಲ್ಲಾ ಸಂಘದ ನಿರ್ದೇಶಕ ಎಂ.ಸಿ.ರಂಗಸ್ವಾಮಿ, ಬೆಳಗೋಡು ಹೋಬಳಿ ಸಂಘದ ಅಧ್ಯಕ್ಷ ಬಸವಣ್ಣ, ತಾಲ್ಲೂಕು ಸಂಘದ ಅಧ್ಯಕ್ಷ ನಟೇಶ್ ಕುಮಾರ್ ಇದ್ದರು.

ಸಮಯಪ್ರಜ್ಞೆಯಿಂದ ಕೆಲಸ ಮಾಡಿದರೆ ಯಶಸ್ಸು

ಬೇಲೂರು : ಸಮಯಪ್ರಜ್ಞೆಯಿಂದ ಯಾವುದೇ ಕೆಲಸ ಮಾಡಿದರೂ ಯಶಸ್ಸನ್ನು ಕಾಣಲು ಸಾಧ್ಯ. ಆದ್ದರಿಂದ ಪ್ರತಿಯೊಬ್ಬರೂ ಸಮಯಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು ಎಂದು ಸಾಹಿತಿ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಬೇಲೂರು ಕೃಷ್ಣಮೂರ್ತಿ ಹೇಳಿದರು.

ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ನಿವೃತ್ತ ನೌಕರರ ಸಂಘದಿಂದ ಶನಿವಾರ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಶ್ರದ್ಧಾ ಭಕ್ತಿಯಿಂದ ಯಾವುದೇ ಕೆಲಸವನ್ನು ಮಾಡಿದಾಗ ಅದರಲ್ಲಿ ಯಶಸ್ಸನ್ನು ಕಾಣಬಹುದು. ನಾವು ಯಾವುದೇ ಕೆಲಸ ಮಾಡಬೇಕಾದರೂ ಮೊದಲು ಶ್ರದ್ಧೆ ಹಾಗೂ ಸಮಯಪ್ರಜ್ಞೆ ಬೆಳೆಸಿಕೊಳ್ಳಬೇಕು. ಇದರಿಂದ ಉತ್ತಮ ಸಾಧನೆಯೊಂದಿಗೆ ಜೀವನದಲ್ಲಿ ಮುಂದೆ ಬರಬಹುದು ಎಂದರು.

ಸಾಲುಮರದ ತಿಮ್ಮಕ್ಕ ತನ್ನ ಮನಸಂತೋಷಕ್ಕಾಗಿ ಗಿಡ ಮರಗಳನ್ನು ಹೇಗೆ ಬೆಳೆಸಿ ಮಾನಸಿಕ ನೆಮ್ಮದಿ ಪಡೆದರೋ ಹಾಗೆಯೇ ನಾವುಗಳು ಸಹ ಅವರಂತೆ ಮಾನಸಿಕ ನೆಮ್ಮದಿ ಪಡೆಯುವುದಕ್ಕೆ ಮುಂದಾಗಬೇಕು. ಸುಖ ಎಂಬುದು ಮಾನಸಿಕ ನೆಮ್ಮದಿಯಿಂದ ಬರುತ್ತದೆಯೇ ಹೊರತು ಶ್ರೀಮಂತಿಕೆಯಿಂದಲ್ಲ. ಆದ್ದರಿಂದ ಪ್ರತಿಯೊಬ್ಬರೂ ಉತ್ತಮ ಮನಸ್ಸನ್ನು ಹೊಂದಿ ನೆಮ್ಮದಿ ಜೀವನ ನಡೆಸಲು ಮುಂದಾಗಬೇಕು ಎಂದರು.

ಕನ್ನಡ ರಾಜ್ಯೋತ್ಸವ ಅಂಗವಾಗಿ ನಿವೃತ್ತ ನೌಕರರಿಗೆ ಏರ್ಪಡಿಸಿದ್ದ ವಿವಿಧ ಕ್ರೀಡಾಕೂಟಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಿ ಮಾತನಾಡಿದ ಪುರಸಭೆ ಅಧ್ಯಕ್ಷೆ ಭಾರತಿ ಅರುಣ್‌ಕುಮಾರ್, ನಿವೃತ್ತಿ ಜೀವನದಲ್ಲಿಯೂ ನಿವೃತ್ತ ನೌಕರರ ಸಂಘದಿಂದ ಸಮಾಜಮುಖಿ ಕೆಲಸಗಳನ್ನು ಮಾಡುತ್ತಿರುವುದು ಶ್ಲಾಘನೀಯವಾಗಿದೆ. ಅಲ್ಲದೆ ಈ ವಯಸ್ಸಿನಲ್ಲಿ ಯುವಕರನ್ನು ಮೀರಿಸುವಂತೆ ಕ್ರೀಡೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆದಿರುವುದು ಸಂತೋಷದ ವಿಷಯವಾಗಿದೆ. ಮುಂದಿನ ದಿನಗಳಲ್ಲಿ ನಿವೃತ್ತ ಜೀವನ ನಡೆಸುತ್ತಿರುವ ನಿಮಗೆ ಭಗವಂತ ಇನ್ನೂ ಹೆಚ್ಚಿನ ಆಯಸ್ಸು, ಆರೋಗ್ಯ ಕೊಡಲಿ ಎಂದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಜಿ.ಪಂ. ಮಾಜಿ ಅಧ್ಯಕ್ಷೆ ಹೇಮಾವತಿ, ನಿವೃತ್ತ ನೌಕರರ ಸಂಘದ ಅಧ್ಯಕ್ಷ ರಾಜೇಗೌಡ, ಕಾರ್ಯದರ್ಶಿ ಸೌಭಾಗ್ಯ, ಪುಟ್ಟಸ್ವಾಮಿಗೌಡ, ಸಿದ್ದೇಗೌಡ, ಕೃಷ್ಣಮೂರ್ತಿ ಇನ್ನಿತರರು ಉಪಸ್ಥಿತರಿದ್ದರು.

80 ಅಡಿ ರಸ್ತೆಗೆ ಟೆಂಡರ್ ಪ್ರಕ್ರಿಯೆ

ಹಾಸನ : 7.50 ಕೋಟಿ ರೂ. ವೆಚ್ಚದಲ್ಲಿ ನಗರದ ಹಬೀಬಿಯಾ ಸಾಮಿಲ್ ಸಮೀಪ 80 ಅಡಿ ರಸ್ತೆ ಕಾಮಗಾರಿ ಶೀಘ್ರ ಆರಂಭಗೊಳ್ಳುವ ಸಾಧ್ಯತೆಗಳಿವೆ. ಇದಕ್ಕೆ ನಗರೋತ್ಥಾನ ಯೋಜನೆಯಡಿ ಟೆಂಡರ್ ಪ್ರಕ್ರಿಯೆಯೂ ನಡೆದಿದೆ.

80 ಅಡಿ ರಸ್ತೆಗೆ ಒತ್ತಾಯಿಸಿ ವಿವಿಧ ಸಂಘ ಸಂಸ್ಥೆಗಳು ಪ್ರತಿಭಟನೆ ನಡೆಸಿದ್ದವು.

ಅಪರಿಚಿತ ವಾಹನ ಡಿಕ್ಕಿ : ವ್ಯಕ್ತಿ ಸಾವು

ಚನ್ನರಾಯಪಟ್ಟಣ : ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಅಪರಿಚಿತ ವ್ಯಕ್ತಿಯೊಬ್ಬ ಸಾವನ್ನಪ್ಪಿರುವ ಘಟನೆ ಶನಿವಾರ ಬೆಳಿಗ್ಗೆ 2.30ರಲ್ಲಿ ತಾಲ್ಲೂಕಿನ ಶೆಟ್ಟಿಹಳ್ಳಿ ಗ್ರಾಮದ ಶೆಟ್ಟಿಹಳ್ಳಿಯಮ್ಮ ದೇವಸ್ಥಾನದ ಎದುರು ನಡೆದಿದೆ.

ಮೃತಪಟ್ಟ ವ್ಯಕ್ತಿ ಸುಮಾರು 50-55 ವರ್ಷದವನೆಂದು ಅಂದಾಜಿಸಲಾಗಿದ್ದು, ವಾಹನ ಡಿಕ್ಕಿ ಹೊಡೆದ ರಭಸಕ್ಕೆ ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ.

ಪ್ರಕರಣ ದಾಖಲಿಸಿರುವ ಪಟ್ಟಣ ಸಂಚಾರಿ ಪೊಲೀಸರು, ಅಪಘಾತ ಮಾಡಿ ಪರಾರಿಯಾಗಿರುವ ವಾಹನದ ಶೋಧ ಕಾರ್ಯ ಮುಂದುವರೆಸಿದ್ದಾರೆ.

ಮುಸ್ಲಿಂ ಬಾಂಧವರಿಂದ ಸಂಭ್ರಮದ ಈದ್ ಮಿಲಾದ್ ಆಚರಣೆ

ಹಾಸನ : ನಗರ ಸೇರಿದಂತೆ ಜಿಲ್ಲಾದ್ಯಂತ ಮುಸ್ಲಿಂ ಬಾಂಧವರು ಶನಿವಾರ ಈದ್‌ಮಿಲಾದ್ ಆಚರಿಸಿದರು.

ಈದ್‌ಮಿಲಾದ್ ಅಂಗವಾಗಿ ಶನಿವಾರ ಸಂಜೆ ನಗರದಲ್ಲಿ ಮುಸ್ಲಿಮರು ಬೃಹತ್ ಮೆರವಣಿಗೆ ನಡೆಸಿದರು. ನಗರದ ಹಳೆ ಮಟನ್ ಮಾರ್ಕೆಟ್ ವೃತ್ತದಿಂದ ಮೆರವಣಿಗೆ ಹೊರಟ ನೂರಾರು ಮುಸ್ಲಿಂ ಬಾಂಧವರು ಘೋಷಣೆ ಕೂಗಿದರು. ಘೋಷಣೆಗಳು ಮುಗಿಲು ಮುಟ್ಟಿದ್ದವು. ಟಿಪ್ಪು ವೇಷಧಾರಿ ಬಾಲಕನೊಬ್ಬ ಗಮನ ಸೆಳೆದನು. ಪ್ರಮುಖ ರಸ್ತೆಗಳಲ್ಲಿ ದಾಹ ನೀಗಿಸುವ ಪಾನೀಯಗಳನ್ನು ನೀಡಲಾಗುತ್ತಿತ್ತು.

ಶಾಸಕ ಹೆಚ್.ಎಸ್.ಪ್ರಕಾಶ್ ಸೇರಿದಂತೆ ಹಲವು ರಾಜಕೀಯ ಮುಖಂಡರು ಮುಸ್ಲಿಂ ಬಾಂಧವರಿಗೆ ಹಬ್ಬದ ಶುಭಾಶಯ ಕೋರಿದರು. ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸ್ ಬಿಗಿ ಬಂದೋಬಸ್ತ್ ಮಾಡಲಾಗಿತ್ತು.

ಬೇಲೂರಿನಲ್ಲೂ ಪೈಗಂಬರ್ ಜನ್ಮ ದಿನ ಆಚರಣೆ

ಪಟ್ಟಣದ ಬದ್ರಿಯಾ ಜುಮ್ಮಾ ಹಾಗೂ ಬದ್ರಿಯಾ ಮಸೀದಿ ಯೂತ್ ಕಮಿಟಿ ಸಂಯುಕ್ತಾಶ್ರಯದಲ್ಲಿ ಪ್ರವಾದಿ ಮಹಮ್ಮದ್ ಪೈಗಂಬರ್‌ರವರ 1492ನೇ ಜನ್ಮ ದಿನಾಚರಣೆ ಹಾಗೂ ಈದ್ ಮಿಲಾದ್ ಹಬ್ಬವನ್ನು ಸಂಭ್ರಮ ಸಡಗರದೊಂದಿಗೆ ಬದ್ರಿಯಾ ಜುಮ್ಮಾ ಮಸೀದಿ ಹಾಗೂ ವಿವಿಧ ಮಸೀದಿಗಳಲ್ಲಿ ಮುಸಲ್ಮಾನ ಬಾಂಧವರು ಆಚರಿಸಿದರು.

ಪಟ್ಟಣದ ಪಂಪ್‌ಹೌಸ್ ರಸ್ತೆಯಲ್ಲಿರುವ ಬದ್ರಿಯಾ ಜುಮ್ಮಾ ಮಸೀದಿ, ಇರ್ಶಾ:ತುಲ್ ಇಸ್ಲಾಂ ಮದ್ರಸ, ಬದ್ರಿಯಾ ಯೂತ್ ಕಮಿಟಿ ವತಿಯಿಂದ ಬೆಳಿಗ್ಗೆ ಮಸೀದಿ ಅಧ್ಯಕ್ಷ ಹಾಗೂ ಬೇಲೂರು-ಹಳೇಬೀಡು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಮಾಲುದ್ದೀನ್ ಧ್ವಜಾರೋಹಣ ನೆರವೇರಿಸಿ ಮುಸ್ಲಿಂ ಬಾಂಧವರಿಗೆ ಈದ್ ಮಿಲಾದ್ ಶುಭಾಶಯ ಕೋರಿದರು.

ಈದ್‌ಮಿಲಾದ್ ಅಂಗವಾಗಿ ತಾಲ್ಲೂಕಿನ ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ಪ್ರದೇಶಗಳಲ್ಲಿ ಪೊಲೀಸ್ ಮತ್ತು ಗೃಹರಕ್ಷಕ ಸಿಬ್ಬಂದಿಗಳನ್ನು ನಿಯೋಜಿಸಲಾಗಿತ್ತು.

ಈದ್ ಮಿಲಾದ್ ಅಂಗವಾಗಿ ಹಾಸನ ನಗರದಲ್ಲಿ ನಡೆದ ಮೆರವಣಿಗೆಯಲ್ಲಿ ಬಾಲಕನೊಬ್ಬ ಟಿಪ್ಪು ಸುಲ್ತಾನ್ ವೇಷ ಧರಿಸಿ ಗಮನ ಸೆಳೆದನು.

ಓಖಿ ಚಂಡಮಾರುತ : ತುಂತುರು ಮಳೆ



- ☐ ಜಿಲ್ಲೆಯ ಹಲವೆಡೆ ಮೋಡ ಕವಿದ ವಾತಾವರಣ
- ☐ ತುಂತುರು ಮಳೆಯಿಂದ ಕಾಫಿ ಬೆಳೆಗೆ ಹಾನಿ
- ☐ ಚಿಂತಾಕ್ರಾಂತರಾಗಿರುವ ರೈತರು
- ☐ ವಿಪರೀತ ಚಳಿ, ಶೀತದ ವಾತಾವರಣ
- ☐ 48 ಗಂಟೆಗಳ ಕಾಲ ಮುಂದುವರಿಕೆ

ಹಾಸನ : ಓಖಿ ಚಂಡಮಾರುತದ ಪರಿಣಾಮ ಜಿಲ್ಲೆಯ ಹಲವೆಡೆ ಮೋಡ ಕವಿದ ವಾತಾವರಣ ಶನಿವಾರ ಕೂಡ ಮುಂದುವರಿದಿದೆ. ಶನಿವಾರ ಬೆಳಿಗ್ಗೆ ಮತ್ತು ಸಂಜೆ ತುಂತುರು ಮಳೆ ಬಿದ್ದಿತು.

ಡಿಸೆಂಬರ್ ತಿಂಗಳಿನಲ್ಲಿ ಉಷ್ಣಾಂಶ 27 ರಿಂದ 28 ಡಿಗ್ರಿ ಸೆಲ್ಷಿಯಸ್ ಇರುತ್ತದೆ. ಆದರೆ ಈಗ 23 ಡಿಗ್ರಿಗೆ ಕುಸಿದಿರುವುದರಿಂದ ಚಳಿಯ ಅನುಭವ ಆಗಿದೆ.

ಬೀಸುತ್ತಿರುವ ಗಾಳಿಯಿಂದ ಜನರು ಸ್ವೆಟರ್, ಕೋಟು, ಟೋಪಿಗಳಿಗೆ ಮೊರೆ ಹೋಗಿದ್ದಾರೆ. ಇನ್ನು ತುಂತುರು ಮಳೆಯಾಗುತ್ತಿರುವುದರಿಂದ ರೈತರು ಚಿಂತೆಗೀಡಾಗಿದ್ದಾರೆ. ಹಲವೆಡೆ ರಾಗಿಯನ್ನು ಕೊಯ್ದು ಶೇಖರಿಸಿಡಲಾಗಿದೆ. ಮಳೆಯಾಗುತ್ತಿರುವುದರಿಂದ ರಾಗಿ ಬೆಳೆ ಹಾಳಾಗಲಿದೆ.

ಇನ್ನು 48 ಗಂಟೆಗಳ ಕಾಲ ಇದೇ ವಾತಾವರಣ ಮುಂದುವರೆಯಲಿದೆ. ನಂತರ ಓಖಿ ಚಂಡಮಾರುತ ತಗ್ಗಲಿದೆ ಎಂದು ಹವಾಮಾನ ಇಲಾಖೆ ಮೂಲಗಳು ತಿಳಿಸಿವೆ.

ಆಲೂರು : ದಲ್ಲಾಳಿಗಳಿದ್ದಾರೆ ಹುಷಾರ್!

☐ **ಆದಿಲ್ ಆಲೂರ್**

ಆಲೂರು : ಜನರಿಂದ ಜನರಿಗಾಗಿ ಇರುವ ಭಾರತದಲ್ಲಿ ಗ್ರಾಮಗಳ ಮತ್ತು ಹಳ್ಳಿಗಳ ಉದ್ಧಾರಕ್ಕಾಗಿ ಸ್ಥಳೀಯ ಸರ್ಕಾರಗಳನ್ನು ಸ್ಥಾಪಿಸಲಾಗಿದೆ.

ಆದರೆ ಆಲೂರು ತಾಲ್ಲೂಕಿನಲ್ಲಂತೂ ಗ್ರಾಮ ಪಂಚಾಯ್ತಿಗಳ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ಕಾರ್ಯವೈಖರಿ ಅಧೋಗತಿಗಿಳಿದಿದೆ.

ಇಲ್ಲಿ ಪ್ರಾಮಾಣಿಕ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಬೆರಳೆಣಿಕೆಯಷ್ಟಿದ್ದಾರೆ ಎನ್ನಬಹುದು. ಗ್ರಾಮ ಪಂಚಾಯ್ತಿ ಅಧಿಕಾರಿ ಸಿಬ್ಬಂದಿ ಯಾವ ರೀತಿ ಹಗಲು ದರೋಡೆಗೆ ಇಳಿದಿದ್ದಾರೆಂದರೆ, ಸರ್ಕಾರದ ಅನುದಾನ, ಸವಲತ್ತುಗಳನ್ನು ಜನಸಾಮಾನ್ಯರಿಗೆ ತಲುಪಿಸಲು ದಲ್ಲಾಳಿಗಳಿದ್ದಾರೆ. ಹಳ್ಳಿಗಳಿಗೆ ಅನುದಾನ ಬಿಡುಗಡೆಯಾಗಬೇಕೆಂದರೆ ಈ ದಲ್ಲಾಳಿಗಳು ಇಂತಿಷ್ಟು ಪರ್ಸೆಂಟೇಜ್ ಫಿಕ್ಸ್ ಮಾಡಿಕೊಂಡಿದ್ದಾರೆ. ಮುಂಗಡವಾಗಿ ಲಂಚ ಕೊಟ್ಟರೆ ಮಾತ್ರ ನಿಮ್ಮ ಕೆಲಸ ಆದಂತೆ. ಇಲ್ಲದಿದ್ದರೆ ನಿಮ್ಮ ಫೈಲ್ ಪೆಂಡಿಂಗ್ ಆಗಿಬಿಡುತ್ತದೆ. ಈ ಬಗ್ಗೆ ಕೇಳಿದರೆ ಟೆಕ್ನಿಕಲ್ ಪ್ರಾಬ್ಲಮ್, ನಿಮ್ಮ ಸ್ಕೆಚ್ ಸರಿ ಇಲ್ಲ ಎನ್ನುತ್ತಾರೆ. ನಿಮಗಾಗದವರು ಯಾರೋ ದೂರು ನೀಡಿದ್ದಾರೆ ಅಥವಾ ಇಂಜಿನಿಯರ್‌ಗೆ ನಿಮ್ಮ ಪ್ಲಾನ್ ಒಪ್ಪಿಗೆಯಾಗುತ್ತಿಲ್ಲ ಎನ್ನುವ ಅವರು, ಇನ್ನೂ ಮುಂದುವರೆದು ಈಗ ಬಂದಿರುವ ಮೇಲಾಧಿಕಾರಿ ಮೊದಲಿನವರ ಹಾಗಲ್ಲ. ಲಂಚ ಇಲ್ಲದೆ ಫೈಲ್ ಅನ್ನೇ ಮುಟ್ಟುವುದಿಲ್ಲ ಎಂದು ಹೇಳುವ ಮಟ್ಟಕ್ಕೆ ಬೆಳೆದುಬಿಟ್ಟಿದ್ದಾರೆ.

ಶೌಚಾಲಯಕ್ಕೆ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಮಾಮೂಲಿ ತಲುಪಿಸಲಿಲ್ಲವೆಂದರೆ ತಿಂಗಳುಗಟ್ಟಲೆ ಶೌಚಾಲಯ ಇಲ್ಲದೆ ಮನೆಯಿಂದ ಹೊಲ ಜಮೀನಿಗೆ ನಿತ್ಯಕರ್ಮಕ್ಕೆ ಅಲೆಯಬೇಕಾದ ಸ್ಥಿತಿ ತಾಲ್ಲೂಕಿನಲ್ಲಿದೆ. ಫಲಾನುಭವಿಗಳು ತೀರಾ ಕಾನೂನು ಆದೇಶಗಳೆಂದು ಮೇಲೆ ಬಿದ್ದರೆ ಅಂತಹವರಿಗೆ ಸೌಲಭ್ಯವೇ ಸಿಗದಂತೆ ಮಾಡುವುದೂ ಕೂಡ ಈ ಗ್ರಾ.ಪಂ. ಅಧಿಕಾರಿ, ಸಿಬ್ಬಂದಿಗಳಿಗೆ ಕಷ್ಟದ ಕೆಲಸವೇನಲ್ಲ.

ರಾಜೀವ್‌ಗಾಂಧಿ ವಸತಿ ಯೋಜನೆಯಡಿ ಮಂಜೂರಾಗಿರುವ ಮನೆಯ ಫೋಟೋ ತೆಗೆಸಿ ಬಿಲ್ ಮಾಡಿಕೊಡಿ ಎಂದರೆ ಒಂದು ಬಿಲ್‌ಗೆ 4 ರಿಂದ 5 ಸಾವಿರ ರೂ. ಲಂಚ ಕೇಳುತ್ತಾರೆ. ಹಣ ನೀಡದಿದ್ದರೆ ಬಿಲ್ ಮಾಡಿಕೊಡುವುದಿಲ್ಲ. ಜನತಾ ಮನೆಗೆ ಜಿ.ಪಿ.ಎಸ್. ಮಾಡಲು 500 ರಿಂದ 1 ಸಾವಿರ ರೂ. ಹಣ ಕೇಳುತ್ತಾರೆ. ಕಾರ್ಯನಿಮಿತ್ತ ಇವರನ್ನು ಸಂಪರ್ಕಿಸುವ ಜನಸಾಮಾನ್ಯರಿಗೆ ಮಾತ್ರ ಇವರು ನಾಟ್ ರೀಚಬಲ್. ಮುಂಗಡವಾಗಿ ಬುಕ್ ಮಾಡಿಕೊಂಡರೆ ಇವರ ದರ್ಶನ ಭಾಗ್ಯ ಲಭ್ಯ.

ಕೆಲ ಕೆಲಸಗಳಿಗೆ ತಾವೇ ಬಿಲ್ ಮಾಡಿಕೊಂಡು ಸರ್ಕಾರದ ಹಣವನ್ನು ಈ ಗ್ರಾ.ಪಂ. ಅಧಿಕಾರಿಗಳು ದುರುಪಯೋಗಪಡಿಸಿಕೊಳ್ಳುತ್ತಿದ್ದು, ಯಾವುದೇ ಕೆಲಸಗಳಿಗಾಗಿ ಪಂಚಾಯ್ತಿಗೆ ತೆರಳಬೇಕೆಂದರೆ ಕಾಣಿಕೆ ಇಲ್ಲದೆ ಹೋಗಲು ಸಾಧ್ಯವೇ ಆಗುತ್ತಿಲ್ಲ. ವಿಲೇಜ್ ಅಕೌಂಟೆಂಟ್, ಪಿ.ಡಿ.ಓ, ಬಿಲ್ ಕಲೆಕ್ಟರ್, ಸೆಕ್ರೆಟರಿ ಹುದ್ದೆಗಳು ಲಾಭದಾಯಕ ಹುದ್ದೆಗಳಾಗಿದ್ದು, ಇವರ ಆದಾಯ ಐ.ಪಿ.ಎಸ್, ಐ.ಎ.ಎಸ್. ಅಧಿಕಾರಿಗಳ ಮಟ್ಟದಲ್ಲಿರಬಹುದು. ಇವರಿಗೆ ಕಡಿವಾಣ ಹಾಕುವವರು ಯಾರು?

BASE Academy of Spoken English & Personality Development

Opp. Govt. Science College, Saraswathi Puram, 2nd main,
(Opp. Electrical Transformer), Behind Internet Parlours, Salagame Road, Hassan

ಇಂಜಿನಿಯರಿಂಗ್, ಡಿಪ್ಲೊಮಾ, ಬಿ.ಎಡ್., ಎಲ್‌ಎಲ್.ಬಿ. ,ಎಂ.ಎ., ಎಂ.ಕಾಂ., ಮುಂತಾದ ವೃತ್ತಿಪರ / ಸಾಮಾನ್ಯ ಇತ್ಯಾದಿ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮತ್ತು ಪ್ರವೇಶ ಬಯಸುವ ವಿದ್ಯಾರ್ಥಿಗಳು ಅವರ ಇಂಗ್ಲೀಷ್ ಭಾಷಾ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡು ಭವಿಷ್ಯದಲ್ಲಿ ಗೆಲುವು ಸಾಧಿಸಲು ಹಾಗೂ ಕ್ಯಾಂಪಸ್ ಆಯ್ಕೆ ಬಯಸುವ ಮತ್ತು ದೇಶ-ವಿದೇಶಗಳಲ್ಲಿ ಉನ್ನತ ಹುದ್ದೆ ಗಳಿಸಲು ಬಯಸುವ ವಿದ್ಯಾರ್ಥಿಗಳಿಗಾಗಿ,

ಉದ್ಯೋಗಸ್ಥರು, ಉದ್ಯೋಗ ಬಯಸುವವರು, ಗೃಹಿಣಿಯರು,
ಮುಂತಾದವರಿಗಾಗಿ 2 ಮತ್ತು 4 ತಿಂಗಳ ಅವಧಿಯ ಸ್ಪೋಕನ್ ಇಂಗ್ಲೀಷ್
ತರಬೇತಿಯ ಹೊಸ ಬ್ಯಾಚ್‌ಗಳು 4-12-2017ರಿಂದ ಪ್ರಾರಂಭವಾಗುತ್ತಿವೆ.

ಆಸಕ್ತರು ಕೂಡಲೇ ಖುದ್ದು ಸಂಪರ್ಕಿಸಿ ಪ್ರವೇಶ ಪಡೆಯಿರಿ.

ಶ್ರೀಮತಿ ಕೃಪಾ ವೆಂಕಟೇಶ್
ಎಂ.ಎ. (ಇಂಗ್ಲೀಷ್), ಎಂ.ಎ. (ಜರ್ನಲಿಸಂ), ಬಿ.ಎಡ್., ಪಿ.ಜಿ.ಡಿ.ಎಂ.ಸಿ.ಜೆ.,
ಪಿ.ಜಿ.ಡಿ. ಇನ್ ಕಮ್ಯುನಿಕೇಟಿವ್ ಇಂಗ್ಲೀಷ್
ನಿರ್ದೇಶಕರು / ಉಪನ್ಯಾಸಕರು
94483 92721, 90089 33049